

ತುದಿಯಲ್ಲಿ ಇನ್ನೂ ಉಳಿದಿದೆ. ನಮ್ಮ ಮುಂಗೈ ಕೀಲುಗಳಲ್ಲಿ ನಮಗೆ ಬೇಕಿಲ್ಲದಷ್ಟು ಮೂಳೆಗಳಿವೆ. ಕೆಲವು ಸ್ನಾಯುಗಳು ಎಲ್ಲಿಗೂ ಅಂಟಿಕೊಂಡಿಲ್ಲದ ಸ್ಥಿತಿಯಲ್ಲಿ ತೂಗಿ ನಿಂತಿವೆ. ಕೆಲವು ನರಗಳು ವಿಚಿತ್ರ ಹಾದಿಯನ್ನು ಅಗತ್ಯವಿಲ್ಲದೆ ಕ್ರಮಿಸುತ್ತವೆ. ಮತ್ತೆ ಕೆಲವು ಲಿಂಫ್ ನೋಡ್‌ಗಳು ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚು ಕೆಟ್ಟದ್ದನ್ನು ಮಾಡುತ್ತವೆ. ನಮ್ಮ ಹಲವು ವಂಶವಾಹಿನಿಗಳ ಪುಟ್ಟ ಕೊಳಗಳು ಯಾವತ್ತಿಗೂ ವ್ಯಕ್ತವಾಗದ ವಂಶವಾಹಿನಿಗಳಿಂದ ತುಂಬಿವೆ. ನಮ್ಮ ಮೆದುಳು ಹಲವು ಬಾರಿ ನಮಗೇ ಮೋಸಮಾಡುತ್ತದೆ. ಕಾಲ್ಪನಿಕ ಪಕ್ಷಪಾತಗಳು, ಪೂರ್ವಗ್ರಹಗಳು, ಕಾರಣವಿಲ್ಲದೆ ಬೇರೆಯವರ ನೋವಿನಲ್ಲಿ ಸಂತಸ ಕಾಣುವ ಸುಪ್ತ ಆಸೆಗಳು, ಒಬ್ಬರನ್ನೊಬ್ಬರು ಕೊಲ್ಲುವ ಹುನ್ನಾರಗಳು, ಇನ್ನೊಬ್ಬರಿಗೆ ಮೋಸ ಮಾಡುವ ಗುಣಗಳು ಮನುಷ್ಯ ಪ್ರಭೇದಕ್ಕೇ ಮುಳುವಾಗಿವೆ.

ಎಷ್ಟೋ ಪ್ರಾಣಿಗಳಿಗೆ ತಮಗೆ ಬೇಕಾದ ಪ್ರೊಟೀನು ಮತ್ತು ವಿಟಮಿನ್ನುಗಳನ್ನು ತಮ್ಮಲ್ಲಿಯೇ ಉತ್ಪಾದಿಸುವ ಶಕ್ತಿಯಿದೆ. ಆದರೆ ಮನುಷ್ಯನಿಗೆ ಇವುಗಳನ್ನು ತನ್ನ ಆಹಾರದಲ್ಲಿ ಹುಡುಕಿ ಸೇರಿಸಿಕೊಳ್ಳುವ ಅನಿವಾರ್ಯತೆಯಿದೆ. ಅಷ್ಟೇ ಏಕೆ, ನಮ್ಮಲ್ಲಿನ ಮಿಲಿಯಗಟ್ಟಲೆ ಜನರಲ್ಲಿ ವೈದ್ಯಕೀಯರಂಗದ ಸಹಾಯವಿಲ್ಲದೆ ಸಂತಾನೋತ್ಪತ್ತಿಯನ್ನು ನಡೆಸುವುದು ಕೂಡ ಸಾಧ್ಯವಿಲ್ಲ. ಇಷ್ಟೆಲ್ಲ ದೈಹಿಕ ನ್ಯೂನತೆಗಳ ಜೊತೆ ಜೊತೆಯಲ್ಲೇ ಜೀವಂತ ಯಂತ್ರಗಳಂತೆ ಕೆಲಸ ಮಾಡಬಲ್ಲ ನಮ್ಮ ದೇಹಗಳು ಬಹುಕಾಲದ ಬಾಳ್ವಿಕೆಗೆ ರೂಪುಗೊಂಡಿಲ್ಲ. ಆದರೆ ಮನುಷ್ಯ ತನ್ನ ಆವಿಷ್ಕಾರಗಳ ಕಾರಣ ದೇಹವೆನ್ನುವ ಯಂತ್ರದ ಜೀವಿತದ ಕಾಲವನ್ನು ಮುಂದೂಡುತ್ತಲೇ ಇದ್ದಾನೆ.

ಮಾನವ ದೇಹದ ರಚನೆಯ ದೋಷಗಳನ್ನು ಅರ್ಥಮಾಡಿಕೊಳ್ಳಲು ಆತ ವಿಕಸನ ಕ್ರಿಯೆಯಲ್ಲಿ ಕ್ರಮಿಸಿದ ಹಾದಿಯನ್ನು ಅವಲೋಕಿಸುವುದು ಅವಶ್ಯಕ. ಇದು ಹೇಗೆಂದರೆ, ಯಾವುದೇ ದೇಶದ ಇಂದಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಆ ದೇಶದ ಚರಿತ್ರೆಯ ಬಗ್ಗೆ ತಿಳಿಯುವುದು ಹೇಗೆ ಅವಶ್ಯಕವೋ ಹಾಗೆ!

ಮಾನವ ದೇಹದ ರಚನೆಯ ನೈಸರ್ಗಿಕ ದೋಷಗಳನ್ನು ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಬಹುದು:

1. ವಿಕಸನ ಕ್ರಿಯೆಯಲ್ಲಿ ಆಯ್ಕೆಯಾಗಿ ಮನುಷ್ಯನಲ್ಲಿ ಸೇರಿದ ದೋಷಗಳು: ಇದುವರೆಗಿನ ಮನುಷ್ಯನ ವಿಕಸನ ನಡೆದದ್ದು ಹಲವು ಮಿಲಿಯನ್ ವರ್ಷಗಳ ಕಾಲಘಟ್ಟದ್ದು ಅತ್ಯಂತ ದೊಡ್ಡ ಮತ್ತು ಕಠಿಣ ಕ್ರಿಯೆ. ಉದಾಹರಣೆಗೆ, ಮನುಷ್ಯರು ಸುಲಭವಾಗಿ ದಪ್ಪಗಾಗುತ್ತಾರೆ. ಆದರೆ ಅಷ್ಟೇ ಸುಲಭವಾಗಿ ಸಣ್ಣಗಾಗಲು ಸಾಧ್ಯವಿಲ್ಲ. ಈ ಆಯ್ಕೆ ನಡೆದದ್ದು ಆಫ್ರಿಕಾದ ಅತಿ ದುಸ್ತರ ಸ್ಥಳಗಳಲ್ಲಿ, ಮನುಷ್ಯ ಪ್ರಾಣಿ ಬದುಕುಳಿಯಲು ಅನುಕೂಲವಾಗಲು. ಆದರೆ ಈ ಆಯ್ಕೆ 21ನೇ ಶತಮಾನದ ಮನುಷ್ಯರ ಆರೋಗ್ಯಕ್ಕೆ ದೊಡ್ಡ ಆತಂಕವಾಗಿ ಪರಿಣಮಿಸಿದೆ.

2. ಮನುಷ್ಯರ ದೇಹ ಅಗತ್ಯಕ್ಕೆ ತಕ್ಕಂತೆ ಪೂರ್ಣ ಹೊಂದಿಕೊಳ್ಳಲು ಸಾಧ್ಯವಾಗದಿರುವುದು: ಉದಾಹರಣೆಗೆ, ನಮ್ಮ ಮೊಣಕಾಲ ಕೀಲುಗಳು ಹಿಂದೊಮ್ಮೆ ಮನುಷ್ಯ ನಾಲ್ಕು ಕಾಲುಗಳ ಮೇಲೆ ನಡೆಯಲು ಸಾಧ್ಯವಾಗುವಂತೆ ಇದ್ದವು. ಆ ಸ್ಥಿತಿಯಿಂದ ಎರಡು ಕಾಲುಗಳ ಮೇಲೆ ತನ್ನೆಲ್ಲ ಚಟುವಟಿಕೆಗಳನ್ನು ಮಾಡಲು ಹೊಂದಿಕೊಳ್ಳಬೇಕಾದ ಅಗತ್ಯದ ಮೂಲಕ ಕ್ರಮಿಸಿದ ಹಾದಿಯಲ್ಲಿ ಮೊಣಕಾಲುಗಳು ಬಹಳಷ್ಟು ಹೊಂದಿಕೊಂಡಿವೆಯಾದರೂ, ಆ ಹೊಂದಾಣಿಕೆ ಇನ್ನೂ ಪೂರ್ತಿಯಾಗಿಲ್ಲ.

3. ಇದುವರೆಗಿನ ವಿಕಸನದ ಹಾದಿಯಲ್ಲಿ ಮನುಷ್ಯನ ದೇಹ ಈಗ ಸ್ಥಾಯಿಯಾಗಿಬಿಟ್ಟಿದೆ: ಇದು ಮಿಕ್ಕೆಲ್ಲ ಪ್ರಭೇದಗಳಿಗೂ ಅನ್ವಯವಾಗುವ ಮಾತು. ಅತಿ ನಿಧಾನವಾಗಿ ಆಗುವ ವಿಕಸನದ ಮೂಲಕ ಮಾನವನ ದೇಹ ಅತ್ಯಲ್ಪ ಬದಲಾವಣೆಗಳನ್ನು ತೋರುತ್ತಿದೆ. ಈ ನಿಟ್ಟಿನಲ್ಲಿ ನಮಗೆ ಇರುವ ದೈಹಿಕ ಮಿತಿಗಳ ಜೊತೆ ಬದುಕಬೇಕಾದ್ದು ಅನಿವಾರ್ಯ. ಇದು ವಿಕಸನ ಕ್ರಿಯೆಯ ಮಿತಿ ಕೂಡ.

ಅತ್ಯಂತ ದೋಷಯುಕ್ತ ಅಂಗಗಳೊಡನೆ ಹುಟ್ಟಿದ ನಂತರ ಅದಕ್ಕೆ ಹೊಂದಿಕೊಂಡು ವಿಕಸನ ಕಾಣುತ್ತ ಹೋಗುವುದು ಅತ್ಯಂತ ನಿಧಾನವಾದ ಮತ್ತು ನೋವಿನ ಸಂಗತಿಯಾಗಿಬಿಡುತ್ತದೆ. ಉದಾಹರಣೆಗೆ, ನಮ್ಮ ಮುಂಗಾಲಿನ ಕೀಲುಗಳಲ್ಲಿ ಅನಗತ್ಯವಾದ ಏಳು ಮೂಳೆಗಳು ಹರಡಿಕೊಂಡಿವೆ. ನಾವು ತಿನ್ನುವ ಆಹಾರ ಮತ್ತು ಉಸಿರಾಡುವ ಗಾಳಿ ಎರಡೂ ಒಂದೇ ಕಿರು ಜಾಗದ ಮೂಲಕ ಹಾದುಹೋಗಬೇಕಾಗುತ್ತದೆ. ಅಂದರೆ, ಒಂದು ಹೋಗುವಾಗ ನಾವು ಇನ್ನೊಂದು ಕ್ರಿಯೆಯನ್ನು ನಿಲ್ಲಿಸಬೇಕಾಗುತ್ತದೆ.

ಹಲವು ಬಾರಿ ವಿಕಸನ ಕ್ರಿಯೆಯಲ್ಲಿಯೇ ದೋಷವಿರುವುದನ್ನೂ ಕಾಣುತ್ತೇವೆ. ಅಂದರೆ, ಒಂದು ಹೊಸ ಅಂಗದ ವಿಕಸನ ನಡೆದಾಗ ಅದು ಮತ್ತೊಂದು ಅಂಗದ ನಾಶಕ್ಕೆ ನಾಂದಿ ಹಾಡುತ್ತದೆ. ಉದಾಹರಣೆಗೆ, ಬಾವಲಿ, ಪಕ್ಷಿಗಳಲ್ಲಿ ರೆಕ್ಕೆಗಳು ಬೇರೆ ಬೇರೆ ರೀತಿಯಲ್ಲಿ ವಿಕಸಿತವಾದರೂ ಅವು ಮುಂಗಾಲುಗಳ ಮಾರ್ಪಾಡಿನಿಂದ ಆದದ್ದು. ಅಂದರೆ, ರೆಕ್ಕೆಗಳಿರುವ ಜೀವಿಗಳಲ್ಲಿ ಕೈಗಳ ಉಪಯೋಗ ಪೂರ್ತಿ ನಿಲ್ಲಬೇಕಾಯಿತು. ತಮ್ಮ ಕೊಕ್ಕು, ಬಾಯಿ ಮತ್ತು ಕಾಲುಗಳಲ್ಲಿ ಅವುಗಳು ತಮಗೆ ಸಾಧ್ಯವಾದ ರೀತಿಯಲ್ಲಿ ಆಹಾರ ಮತ್ತಿತರ

**ವಿಕಸನ ಕ್ರಿಯೆ, ಹೊಸ ವಿಚಾರದ ನೀಲಿ ನಕಾಶೆಯನ್ನು ಪ್ರತಿ ಜೀವಕೋಶಗಳ ಒಳಗೆ ನಕಲು ಮಾಡಿ ಸೇರಿಸಬೇಕಾಗುತ್ತದೆ. ವಂಶವಾಹಿನಿಗಳ ನೆನಪಿನಲ್ಲಿ ಈ ಬದಲಾವಣೆಗಳನ್ನು ಹುದುಗಿಸಬೇಕಾಗುತ್ತದೆ. ಫಲಿತಾಂಶಗಳನ್ನು ನಿರುಕಿಸಿ ಹೊಂದಾಣಿಕೆಯನ್ನು ಮಾಡಬೇಕಾಗುತ್ತದೆ.**